THE TIMES OF INDIA, MANGALURU
WEDNESDAY, JUNE 27, 2018

# Brain dead woman's seven organs harvested

TIMES NEWS NETWORK

**Manipal:** A brain dead victim's seven organs were donated to needy patients.

According to a release from KMC Hospital, Manipal, Nirmala Bhat, 53, wife of Vasudev Bhat from Karkala met with an accident on Tellar Road, Mathr Nivas near Ravalnath Temple, Karkala at 7.30pm on June 22. She was referred to Kasturba Hospital Manipal and was admitted in ICU around 1am on June 23 under the department of neurosurgery. On June 25 at 12.30pm, she was declared as brain dead as per the protocol stipulated by the Transplantation of Human Organ Act 1994 by four senior doctors of the medical board.

The hospital added that there was no chance that she would have recovered from the condition or regained her consciousness. Her breathing was supported by the ventilator to harvest organs for transplantation — two heart valves, corneas, kidneys and liver. Bhat and family members expressed their willingness to donate the organs of Nirmala, after the doctors informed about her condition.

TOI



SAVING LIVES: Harvested organs being transported from Manipal to Bengaluru

As decided by the Transplantation Authority, corneas and a kidney were provided to patients admitted in Kasturba Hospital. The liver harvested by surgeons from BGS Hospital, Bengaluru for the identified patient. Two heart valves would be used on a patient at Narayana Hrudayalaya, Bengaluru and a kidney for a patient in Mangaluru.

Though the doctors came to harvest organs by helicopter, they could not return by the same due to some technical glitches. Later at 3.40pm, the authorities took two heart valves and liver by road to Mangaluru and later by a flight. The kidneys were sent to Mangaluru at 4.15pm.

Dr Avinash Shetty, medical superintendent, said that with this noble gesture of the family of Nirmala, seven needy patients received extension of their lives through transplantation.

2 DECCAN HERALD
Wednesday, June 27, 2018

# Accident victim gives fresh lease of life to 7 needy persons

UDUPI: Nirmala Bhat (51), wife of Vasudev Bhat from Karkala, met with a road accident at Tellar Road, Mathr Nivas near Ravalnath Temple, Karkala on June 22 at 7.30 pm and was referred to Kasturba Hospital Manipal ICU at 1 am on June 23, under the Department of Neurosurgery.

At 12.30 pm on June 25, she was declared as brain-dead as per the protocol stipulated by the Transplantation of Human Organ Act 1994 by four senior doctors of the Medical board. There was no chance that she will recover from this condition or regain her consciousness. Her breathing was supported by the ventilator so as to harvest organs for transplantation namely two heart valves, both corneas, both kidneys and liver.

Her husband Vasudev Bhat and family members expressed their willingness to donate the organs of Nirmala Bhat.

As decided by the Transplantation Authority, corneas and one kidney would be provided to patients admitted in Kasturba Hospital, Manipal. The liver harvested by surgeons from BGS Hospital, Bengaluru for the identified patient would be airlifted by helicopter from Kasturba Hospital, Manipal. Two heart valves would be used on patient from Bengaluru, one kidney for a patient in Mangaluru.

Medical Superintendent Dr Avinash Shetty said that the noble gesture of the family of Nirmala Bhat has helped seven needy patients get a fresh lease of life through transplantation.

DH News Service

THE NEW INDIAN EXPRESS
WEDNESDAY 27.06.2018

# Brain-dead patient's organs donated to help seven people in need

ENS @ Manipal



Organs harvested from a cadaver patient at Kasturba Hospital Manipal were transported from the hospital for transplantation

A woman meeting with a fatal road accident and pronounced brain dead later in the hospital here saved seven other critical patients after her organs were donated by the family.

On June 22, Nirmala Bhat(51) from Karkala met with a road accident at Tellar road, Mathr Nivas near Ravalnath Temple, Karkala. She was referred to Kasturba Hospital, Manipal and was admitted in ICU around 1 am on June 23 under the care of Neurosurgery department.

After she failed to respond to treatment, Nirmala was declared brain dead on Monday afternoon. As per the protocol stipulated by the Transplantation of Human Organ Act 1994, four senior doctors of the Medical board studied her case and found that there was no chance she will recover from this condition or regain consciousness.

Her breathing was supported by the ventilator so as to harvest organs for transplantation namely two heart valves, both corneas, both kidneys and liver after her husband Vasudev Bhat and family members expressed their willingness to donate the organs of the patient.

A statement issued by the hospital observed that as decided by the Transplantation Authority, Corneas and one Kidney will be provided to patients admitted in Kasturba Hospital, Manipal. The liver harvested by surgeons from BGS Hospital, Bengaluru for the identified patient will be airlifted by a helicopter from Kasturba Hospital, Manipal. Two heart valves will be used on patients from Bengaluru and one kidney for a patient in Mangaluru.

Hailing the decision of the family, Dr Avinash Shetty, Medical Superintendent of the hospital said: "With this noble gesture of Nirmala Bhat's family, seven patients in need will be get a new lease of life through transplantations."

ಕನ್ನಡಪ್ರಭ
ಬುಧವಾರ 27.6.2018
ಮಂಗಳೂರು

# ಮಹಿಳೆ ಅಂಗಾಂಗ ದಾನ: 7 ಮಂದಿಗೆ ಮರುಹುಟ್ಟು

**ಮಣಿಪಾಲ:** ಅಪಘಾತದಲ್ಲಿ ಮೃತಪಟ್ಟ ಕಾರ್ಕಳದ ನಿರ್ಮಲಾ ಭಟ್ (51) ಅವರ ಅಂಗಾಗಗಳನ್ನು ಸಂಬಂಧಿಕರು ದಾನಮಾಡಿದ್ದು, ಇದರಿಂದ 7 ಮಂದಿ ಮರು ಜೀವ ಪಡೆದುಕೊಳ್ಳಲು ಸಾಧ್ಯವಾಗಿದೆ.

ಕಾರ್ಕಳದ ರವಳನಾಥ ದೇವಸ್ಥಾನದ ಸಮೀಪದ ಮಾತೃ ಸದನ ಎಂಬ ಮನೆಯ ನಿವಾಸಿ ವಾಸುದೇವ ಭಟ್ ಅವರ ಪತ್ನಿ ನಿರ್ಮಲಾ ಭಟ್ ಕಾರ್ಕಳದ ತೆಳ್ಳಾರು ರಸ್ತೆಯಲ್ಲಿ ಜೂ.22ರಂದು ರಾತ್ರಿ ಅಪಘಾತಕ್ಕೊಳಗಾಗಿದ್ದರು. ಅವರನ್ನು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ದಾಖಲಿಸಲಾಗಿತ್ತು. ಅವರು ಮಂಗಳವಾರ ಕೊನೆಯುಸಿರೆಳೆದರು.

ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ನಾಲ್ಕು ಮಂದಿ ಹಿರಿಯ ವೈದ್ಯರು ಅಪರಾಹ್ನ 12.30ಕ್ಕೆ, ಮಾನವ ಸಂರಕ್ಷಣೆ ಕಾಯ್ದೆ 1994ರ ನಿಯಮಗಳಂತೆ ನಿರ್ಮಲ ಭಟ್ ಮೆದುಳು ಮೃತ ರೋಗಿ ಎಂದು ಘೋಷಿಸಿದರು. ಅವರು ಈ ಸ್ಥಿತಿಯಿಂದ ಪುನಃ ಚೇತರಿಸಿಕೊಳ್ಳುವುದಕ್ಕೆ ಅಥವಾ ಬದುಕುವುದಕ್ಕೆ ಯಾವುದೇ ಅವಕಾಶವಿರಲಿಲ್ಲ.

ಈ ಸಂದರ್ಭದಲ್ಲಿ ಅವರ ಪತಿ ವಾಸುದೇವ್ ಭಟ್ ಮತ್ತು ಕುಟುಂಬದ ಸದಸ್ಯರು. ಅವರ ಅಂಗಾಂಗಗಳನ್ನು ದಾನ ಮಾಡುವ ಇಚ್ಛೆ ವ್ಯಕ್ತಪಡಿಸಿದರು. ಅದರಂತೆ ನಿರ್ಮಲಾ ಭಟ್ ದೇಹಕ್ಕೆ ಕೃತಕ ಮೂಲಗಳಿಂದ ಉಸಿರಾಟವನ್ನು ಪೂರೈಕೆ ಮಾಡಿ, ಅವರ 2 ಹೃದಯ ಕವಾಟ, 2 ಕಣ್ಣು ಗುಡ್ಡೆ (ಕಾರ್ನಿಯಾ), 2 ಮೂತ್ರಪಿಂಡ (ಕಿಡ್ನಿ) ಮತ್ತು 1 ಯಕೃತ್ತು (ಲಿವರ್)ಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ಪಡೆಯಲಾಯಿತು.



ಮೃತ ಮಹಿಳೆಯ ಅಂಗಾಂಗಗಳನ್ನು ಸಾಗಿಸುತ್ತಿರುವುದು.

ನಂತರ ಅದೇ ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳಿಬ್ಬರಿಗೆ ಕಣ್ಣು ಗುಡ್ಡೆಗಳನ್ನು ಮತ್ತು ಒಬ್ಬ ರೋಗಿಗೆ ಒಂದು ಮೂತ್ರಪಿಂಡವನ್ನು ಕಸಿ ಮಾಡಲಾಯಿತು. ಬೆಂಗಳೂರಿನ ಆಸ್ಪತ್ರೆಯೊಂದರ ಮೂವರು ರೋಗಿಗಳಿಗೆ ಯಕೃತ್ತು ಮತ್ತು ಎರಡು ಹೃದಯ ಕವಾಟ, ಮಂಗಳೂರಿನ ಒಬ್ಬ ರೋಗಿಗೆ ಒಂದು ಮೂತ್ರಪಿಂಡಗಳನ್ನು ಕಳುಹಿಸಲಾಯಿತು.

ಉಡುಪಿ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯಸಹಕಾರದೊಂದಿಗೆಉಡುಪಿಯಿಂದ ಮಂಗಳೂರು ವಿಮಾನ ನಿಲ್ದಾಣದವರೆಗೆ ರಾ.ಹೆ. 66ರಲ್ಲಿ ಸುಮಾರು 1 ಗಂಟೆ ಕಾಲ ಗ್ರೀನ್ ಕಾರಿಡಾರ್ ಮೂಲಕ ವಾಹನ ಸಂಚಾರವನ್ನು ನಿಯಂತ್ರಿಸಿ, ಅತ್ಯಂತ ಕ್ಷಿಪ್ರವಾಗಿ ಅಂಗಾಂಗಗಳನ್ನು ಕಳುಹಿಲಾಯಿತು. ಅಲ್ಲಿಂದ ವಿಶೇಷ ವಿಮಾನ ಮೂಲಕ ಬೆಂಗಳೂರಿಗೆ ತಲುಪಿಸಲಾಯಿತು.

ಕಸ್ತೂರ್ಬಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ ಶೆಟ್ಟಿ ಈ ಕುರಿತು ಪ್ರತಿಕ್ರಿಯಿಸಿದ್ದು, ನಿರ್ಮಲಾ ಭಟ್ ಅವರು ಭೌತಿಕವಾಗಿ ಇಲ್ಲದಿದ್ದರೂ, ಕುಟುಂಬದ ಈ ಉದಾರ ಮನೋಭಾವದಿಂದಾಗಿ 7 ಮಂದಿ ಜೀವದಾನವನ್ನು ಪಡೆದಿದ್ದು, ಅವರಲ್ಲಿ ಜೋಡಿಸಲಾಗಿರುವ ಅಂಗಾಂಗಳ ಮೂಲಕ ನಿರ್ಮಲಾ ಭಟ್ ಅವರ ಜೀವನದ ವಿಸ್ತರಣೆಯಾಗಿದೆ. ವಾಸುದೇವ ಭಟ್ ಮತ್ತು ಅವರ ಮನೆಯವರು ಇತರರಿಗೆ ಆದರ್ಶವಾಗಿದ್ದಾರೆ ಎಂದು ಶ್ಲಾಘಿಸಿದ್ದಾರೆ.

ಪ್ರಜಾವಾಣಿ ಬುಧವಾರ ● ಜೂನ್ 27, 2018

# 7 ಜೀವಕ್ಕೆ ಬೆಳಕಾಯಿತು ಒಂದು ಸಾವು

## ಮಿದುಳು ನಿಷ್ಕ್ರಿಯಗೊಂಡಿದ್ದ ಮಹಿಳೆಯ ಅಂಗಾಂಗ ದಾನ: ಗ್ರೀನ್ ಕಾರಿಡಾರ್ ಮೂಲಕ ರವಾನೆ

ಪ್ರಜಾವಾಣಿ ವಾರ್ತೆ

ಉಡುಪಿ: ಮಂಗಳವಾರ ಮಧ್ಯಾಹ್ನ ಮಣಿಪಾಲದ ಕೆಎಂಸಿ ಆಸ್ಪತ್ರೆಯಿಂದ ಹೊರಟ 2 ಅಂಬುಲೆನ್ಸ್‌ಗಳು ಕೆಲವೇ ಕ್ಷಣಗಳಲ್ಲಿ ಉಡುಪಿ ತಲುಪಿದವು. ಅಲ್ಲಿಂದ ನೇರವಾಗಿ ಮಂಗಳೂರು ವಿಮಾನ ನಿಲ್ದಾಣಕ್ಕೆ ಬಂದವು. ಒಂದು ಅಂಬುಲೆನ್ಸ್‌ನಲ್ಲಿದ್ದ ಬಾಕ್ಸ್ ಅನ್ನು ಬೆಂಗಳೂರಿಗೆ ರವಾನಿಸಿದರೆ, ಮತ್ತೊಂದು ಅಂಬುಲೆನ್ಸ್‌ನಲ್ಲಿದ್ದ ಬಾಕ್ಸ್ ಅನ್ನು ಮಂಗಳೂರಿನ ಆಸ್ಪತ್ರೆಗೆ ಸಾಗಿಸಲಾಯಿತು. ಅಷ್ಟೊತ್ತಿಗೆ ಅಲ್ಲಿದ್ದವರ ಮುಖದಲ್ಲಿ ನಿರಾಳ ಭಾವ ಮೂಡಿತು.

ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಮಿದುಳು ನಿಷ್ಕ್ರಿಯಗೊಂಡಿದ್ದ ಕಾರ್ಕಳದ ನಿರ್ಮಲಾ ಭಟ್ (51) ಅವರ ದೇಹದ 7 ಪ್ರಮುಖ ಅಂಗಾಗಗಳನ್ನು ಮಣಿಪಾಲದ ಕೆಎಂಸಿ ಆಸ್ಪತ್ರೆಯಿಂದ ಹಸಿರು ಕಾರಿಡಾರ್ ಸಂಚಾರ ವ್ಯವಸ್ಥೆಯಲ್ಲಿ (ಝೀರೋ ಟ್ರಾಫಿಕ್) ಸಾಗಿಸಿದ ರೀತಿ ಇದು. ಈ ಕಾರ್ಯಕ್ಕೆ ವೈದ್ಯರು ಹಾಗೂ ಜಿಲ್ಲಾ ಪೊಲೀಸರು ನೆರವಾದರು.



ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಮಿದುಳು ನಿಷ್ಕ್ರಿಯಗೊಂಡಿದ್ದ ಕಾರ್ಕಳದ ನಿರ್ಮಲಾ ಭಟ್ ಅವರ ದೇಹದ 7 ಪ್ರಮುಖ ಅಂಗಾಗಗಳನ್ನು ಮಣಿಪಾಲದ ಕೆಎಂಸಿ ಆಸ್ಪತ್ರೆಯಿಂದ ಹೊರತರುತ್ತಿರುವುದು. ಪ್ರಜಾವಾಣಿ ಚಿತ್ರ

ಜೂನ್ 22ರಂದು ರಾತ್ರಿ 7.30ಕ್ಕೆ ಕಾರ್ಕಳದ ನಿರ್ಮಲಾ ಭಟ್ ಅವರಿಗೆ ತೆಳ್ಳಾರು ರಸ್ತೆಯಲ್ಲಿ ಅಪಘಾತವಾಗಿತ್ತು. ಹೆಚ್ಚಿನ ಚಿಕಿತ್ಸೆಗೆ ಅವರನ್ನು 23 ರಂದು ಮಣಿಪಾಲದ ಕಸ್ತೂರಬಾ ಆಸ್ಪತ್ರೆಗೆ ದಾಖಲಿಸಿ ತೀವ್ರನಿಘಾ ಘಟಕದಲ್ಲಿ ಚಿಕಿತ್ಸೆ ನೀಡಲಾಗಿತ್ತು. ಜೂನ್ 25 ರಂದು ಮಧ್ಯಾಹ್ನ 12:30ಕ್ಕೆ ವೈದ್ಯಕೀಯ ಮಂಡಳಿಯ ನಾಲ್ವರು ವೈದ್ಯರು ಮೆದುಳು ಮೃತವಾಗಿರುವ (ಬ್ರೇನ್ ಡೆತ್) ಬಗ್ಗೆ ಅಧಿಕೃತವಾಗಿ ಘೋಷಿಸಿದ್ದರು.

### ಮುಖ್ಯಾಂಶಗಳು

- ನಿರ್ಮಲಾ ಭಟ್ ಅಪಘಾತಕ್ಕಿಡಾಗಿ ಗಾಯಗೊಂಡಿದ್ದರು
- ಅಂಗಾಂಗ ದಾನಕ್ಕೆ ಪತಿ ನಿರ್ಧಾರ: ಕುಟುಂಬದ ಸಾಥ್
- ಮಣಿಪಾಲ ಕಸ್ತೂರಬಾ ಆಸ್ಪತ್ರೆಗೆ ದಾಖಲಾಗಿದ್ದರೂ ಸಿಗದ ಪ್ರತಿಫಲ

ಕುಟುಂಬದವರ ಒಪ್ಪಿಗೆಯಂತೆ ಹೃದಯದ ಎರಡು ಕವಾಟ, ಕಣ್ಣು ಗುಡ್ಡೆ (ಕಾರ್ನಿಯಾ), ಮೂತ್ರಪಿಂಡ (ಕಿಡ್ನಿ) ಮತ್ತು ಯಕೃತ್ತು (ಲಿವರ್) ಕಸಿಗೆ ತಯಾರು ಮಾಡಿಕೊಂಡು ಅಗತ್ಯವಿದ್ದವರಿಗೆ ಒದಗಿಸಲು ವ್ಯವಸ್ಥೆ ಮಾಡಲಾಯಿತು ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ತಿಳಿಸಿದರು.

ಕಸಿ ಪ್ರಾಧಿಕಾರ ನಿರ್ಧರಿಸಿದಂತೆ ಕಸ್ತೂರಬಾ ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳಿಗೆ ಕಣ್ಣು ಗುಡ್ಡೆ ಹಾಗೂ ಒಂದು ಮೂತ್ರಪಿಂಡ ಒದಗಿಸಲಾಗುವುದು. ಬೆಂಗಳೂರಿನಲ್ಲಿ ಗುರುತಿಸಲಾದ ರೋಗಿಗಳಿಗೆ ಯಕೃತ್ ಮತ್ತು ಎರಡು ಹೃದಯ ಕವಾಟ, ಮಂಗಳೂರಿನಲ್ಲಿ ಗುರುತಿಸಲಾದ ರೋಗಿಗೆ ಒಂದು ಮೂತ್ರಪಿಂಡವನ್ನು ಅಳವಡಿಸಲಾಗುವುದು ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ಸ್ಪಷ್ಟಪಡಿಸಿದ್ದಾರೆ.

ನಿರ್ಮಲಾ ಭಟ್ ಅವರ ಕುಟುಂಬದ ದಿಟ್ಟ ನಿರ್ಧಾರ 7 ರೋಗಿಗಳ ಬಾಳಿಗೆ ಬೆಳಕಾಗಿದೆ ಎಂದರು.

ವಿಜಯ ಕರ್ನಾಟಕ VK

02 | ಬುಧವಾರ,27 ಜೂನ್ 2018, ಮಂಗಳೂರು

# 7 ಮಂದಿಗೆ ಹೊಸ ಬಾಳು ಕೊಟ್ಟ ನಿರ್ಮಲಾ ತಾಯಿ

## ರಸ್ತೆ ಅಪಘಾತದಿಂದ ಮೆದುಳು ನಿಷ್ಕ್ರಿಯ




■ ವಿಕ ಸುದ್ದಿಲೋಕ ಉಡುಪಿ

ರಸ್ತೆ ಅಪಘಾತಕ್ಕೀಡಾಗಿ ಮಣಿಪಾಲ ಕೆಎಂಸಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಾರ್ಕಳದ ನಿರ್ಮಲಾ ವಿ. ಭಟ್ ಅಂಗಾಂಗ ದಾನ ಏಳು ಮಂದಿಯ ಬಾಳಿಗೆ ಬೆಳಕಾಗಿದೆ.

ಕಾರ್ಕಳ ರವಳನಾಥ ದೇವಸ್ಥಾನ ಬಳಿಯ ಮಾತೃ ನಿವಾಸದ ವಾಸುದೇವ ಭಟ್ ಅವರ ಪತ್ನಿ ನಿರ್ಮಲಾ ಭಟ್ ಮೆದುಳು ನಿಷ್ಕ್ರಿಯಗೊಂಡಿದ್ದು ಅಂಗಾಂಗವನ್ನು ಕುಟುಂಬ ದಾನ ಮಾಡಲು ಒಪ್ಪಿಗೆ ನೀಡಿತ್ತು.

**ಘಟನೆ ವಿವರ:** ಜೂ. 22ರಂದು ರಾತ್ರಿ 7.45 ಕ್ಕೆ ರವಳನಾಥ ದೇವಸ್ಥಾನ ಸಮೀಪ ತಮ್ಮ ಮನೆಯಿಂದ ತೆಳ್ಳಾರು ಕಡೆಗೆ ನಿರ್ಮಲಾ ವಿ. ಭಟ್ ನಡೆದುಕೊಂಡು ಹೋಗುತ್ತಿದ್ದರು. ಈ ವೇಳೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದ ಪರಿಣಾಮ ನಿರ್ಮಲಾ ಭಟ್ ಗಂಭೀರ ಗಾಯಗೊಂಡಿದ್ದರು. ಜೂ. 23 ರಂದು ಮಣಿಪಾಲ ಕೆಎಂಸಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಜೂ. 25ರಂದು ಮಧ್ಯಾಹ್ನ 12.30 ಕ್ಕೆ ವೈದ್ಯಕೀಯ ಮಂಡಳಿಯ ನಾಲ್ಕು ಹಿರಿಯ ವೈದ್ಯರು ಮಾನವ ಸಂರಕ್ಷಣೆ ಕಾಯ್ದೆ 1994 ರ ಅನ್ವಯ ಬ್ರೈನ್ ಡೆಡ್ ಎಂದು ಘೋಷಿಸಿದರು. ಬಳಿಕ ಮೃತರ ಪತಿ ವಾಸುದೇವ್ ಭಟ್ ಮತ್ತು ಕುಟುಂಬದ ಸದಸ್ಯರು ನಿರ್ಮಲಾ ಭಟ್ ಅವರ ಅಂಗಾಂಗಳನ್ನು ದಾನ ಮಾಡುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಅದರಂತೆ ನಿರ್ಮಲಾ ಅವರ ಎರಡು ಹೃದಯ ಕವಾಟ, ಕಣ್ಣು ಗುಡ್ಡೆ (ಕಾರ್ನಿಯಾ), ಮೂತ್ರಪಿಂಡ (ಕಿಡ್ನಿ) ಮತ್ತು ಯಕೃತ್ತು (ಲಿವರ್) ನ್ನು ದಾನ ಮಾಡಲಾಯಿತು.

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳಿಗೆ ಕಣ್ಣು ಗುಡ್ಡೆ ಮತ್ತು ಒಂದು ಮೂತ್ರಪಿಂಡವನ್ನು ಒದಗಿಸಲಾಗುವುದು. ಬೆಂಗಳೂರಿನ ಖಾಸಗಿ ಆಸ್ಪತ್ರೆಯೊಂದರ ಮೂವರು ರೋಗಿಗಳಿಗೆ ಯಕೃತ್ತು ಮತ್ತು ಎರಡು ಹೃದಯ ಕವಾಟ, ಮಂಗಳೂರಿನ ಕೆಎಂಸಿ ಅತ್ತಾವರ ಆಸ್ಪತ್ರೆಯ ರೋಗಿಯೊಬ್ಬರಿಗೆ ಮೂತ್ರಪಿಂಡ ಬಳಸಲಾಗುವುದು ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

### ಹೆಲಿಕಾಪ್ಟರ್‌ನಲ್ಲಿ ತಾಂತ್ರಿಕ ದೋಷ

**ಅಂಗಾಂಗವನ್ನು ಮಣಿಪಾಲದಿಂದ ಆದಿ ಉಡುಪಿ ಹೆಲಿಪ್ಯಾಡ್‌ಗೆ ತಂದು ಅಲ್ಲಿಂದ ಬಜ್ಪೆಗೆ ಸಾಗಿಸಿ ವಿಮಾನದ ಮೂಲಕ ಬೆಂಗಳೂರಿಗೆ ರವಾನೆ ಮಾಡಲು ನಿರ್ಧರಿಸಲಾಗಿತ್ತು. ಹೆಲಿಕಾಪ್ಟರ್ ನಲ್ಲಿ ತಾಂತ್ರಿಕ ದೋಷ ಕಂಡು ಬಂದ ಹಿನ್ನೆಲೆಯಲ್ಲಿ ರಸ್ತೆ ಮೂಲಕವೇ ಅಂಗಾಂಗವನ್ನು ರವಾನೆ ಮಾಡಲಾಯಿತು.**

### ಬಿಗಿ ಭದ್ರತೆಯಲ್ಲಿ ಅಂಗಾಂಗ ರವಾನೆ

**ಮಣಿಪಾಲ ಕೆಎಂಸಿ ಆಸ್ಪತ್ರೆಯಿಂದ ಮಂಗಳವಾರ ಮಧ್ಯಾಹ್ನ ಮಂಗಳೂರಿಗೆ ಅಂಗಾಂಗವನ್ನು ಪೊಲೀಸ್ ಬೆಂಗಾವಲು ಪಡೆಯೊಂದಿಗೆ ಹೆಜಮಾಡಿ ಗಡಿವರೆಗೆ ಆ್ಯಂಬ್ಯುಲೆನ್ಸ್‌ನಲ್ಲಿ ಸಾಗಿಸಲಾಯಿತು. ಜಿಲ್ಲಾ ಪೊಲೀಸ್ ಇಲಾಖೆ, ಸಂಚಾರ ಪೊಲೀಸರು ಸಹಕಾರ ಕೊಟ್ಟರು. ಬೆಂಗಳೂರಿಗೆ ಸಾಗಬೇಕಿದ್ದ ಯಕೃತ್ತು ಮತ್ತು ಎರಡು ಹೃದಯ ಕವಾಟವಿದ್ದ ಆಂಬ್ಯುಲೆನ್ಸ್ ಮಧ್ಯಾಹ್ನ 3.15 ಕ್ಕೆ ಮಣಿಪಾಲ ಬಿಟ್ಟಿತ್ತು. ಮಂಗಳೂರಿನಿಂದ ವಿಮಾನದ ಮೂಲಕ ಬೆಂಗಳೂರಿಗೆ ಸಾಗಿಸಲಾಯಿತು. ಒಂದು ಕಿಡ್ನಿಯಿದ್ದ ಆಂಬ್ಯುಲೆನ್ಸ್ ಮಧ್ಯಾಹ್ನ 3.50 ಕ್ಕೆ ಮಂಗಳೂರಿಗೆ ಸಾಗಿತ್ತು.**